ಮೀನಿನಂತೆ ಕಣ್ಣು ಉಳ್ಳವಳು ಮೀನಾಕ್ಷಿ. ಬಹುವ್ರೀಹಿ ಸಮಾಸ, ಸವರ್ಣದೀರ್ಘಸಂಧಿ ಅಂತ ಸ್ಕೂಲಲ್ಲಿ ಕೇಳುತ್ತಿದ್ದ ಪಾಠ ನೆನಪಾಗಿ ಕಾಫಿ ಹಿಡಿದು ಬಂದ ಅವಳ ಕಣ್ಣುಗಳನ್ನೇ ವೀಕ್ಷಿಸಿದ. ಅವಳ ಕಣ್ಣುಗಳು ಮೀನಿನಂತಿರಲಿಲ್ಲ. ಅವಳ ಜಲಮಿಶ್ರಿತ ಕಣ್ಣುಗಳು ಕಿಟಕಿಯಿಂದ ಹಾದುಬರುವ ಬೆಳಕಿನಲ್ಲಿ ಮಿಕ್ಸ್ ಆಗಿ ಫಳಫಳನೆ ಹೊಳೆವಾಗ ಜಲಜಾಕ್ಷಿ ಎಂಬ ನಾಮಧೇಯವೇ ಇವಳಿಗೆ ಲಾಯಕ್ಕು ಅಂದುಕೊಂಡ.



ನೂರಾ ಒಂದು ಹೆಣ್ಣುಗಳನ್ನಾದರೂ ನೋಡಿದ್ದಾನು ರಮೇಶ. ಕಡೆಗೂ ಒಪ್ಕೊಂಡ್ನಲ್ಲ ಎಂಬ ಸುವಾರ್ತೆಯನ್ನು ಅವನ ಗೆಳೆಯರಿಂದ ಕೇಳಿದ ರಮೇಶನ ತಾಯಿ ನಿಟ್ಟುಸಿರುಬಿಟ್ಟಳು. ಈ ವಿಷಯದಲ್ಲಿ ರಮೇಶನದ್ದು ಗಿನ್ನಿಸ್ ದಾಖಲೆ ಅನ್ನಬಹುದು. ಸದ್ಯ, ಹೆಣ್ಣು ಹೆತ್ತವರ ಮನೆಗ್ಹೋಗಿ ಬಿಟ್ಟಿ ಉಪ್ಪಿಟ್ಟು ಕೇಸರಿಬಾತು ತಿನ್ನೋ ಗ್ರಹಚಾರ ತಪ್ಪಿತೆಂಬ ಸಡಗರ ರಮೇಶನ ತಂದೆಯದ್ದು. 'ದ್ರ್ಯಾಬೆ ನನ್ಮಗ ಹೆಣ್ಣುಗಳನ್ನ ನೋಡಿ ನೋಡಿಯೇ ಮುಪ್ಪಾಗಿಹೋದ. ತಲೆ ಕೂದಲು ಪೂರಾ ಬೆಳ್ಳಗಾಗೋದ್ರೊಳಗೆ ಹೆಣ್ಣನ್ನ ಸೆಲೆಕ್ಟ್ ಮಾಡಿದ್ನಲ್ಲ' ಎಂಬ ತಮಾಷೆ ಗೆಳೆಯರದ್ದು. 'ಈ ವಯಸ್ಸಿಗೆ ಹೆಣ್ಣು ತೋರಿಸಿ ತೋರ್ಸಿಯೇ ನನ್ನ ಹೆಣ ಬಿದ್ದೋತ್ತು' ಎಂಬ ನಿಟ್ಟುಸಿರು ಕಂಠಿ ಜೋಯಿಸರದ್ದು.

ಯಾರು ನಿಟ್ಟುಸಿರು ಬಿಟ್ಟರೇನು, ಯಾರ ಹೆಣ ಬಿದ್ದರೇನು, ಹೆಣ್ಣು ಸೆಲೆಕ್ಟ್ ಮಾಡೋದು ಅಂದ್ರೇನು ಹುಡುಗಾಟವಾ? ಅವಳೇನು ಬುಟ್ಟೀಲಿಟ್ಟು ಮಾರೋ ತರಕಾರಿನಾ? ನಾಳೆ ಬೇರೆ ತರಕಾರಿ ತಗೊಂಡ್ರಾಯ್ತು ಅಂತ ಸಮಾಧಾನ ಮಾಡ್ಕೊಳ್ಳೋಕೆ. ತತ್ತಾಪಿ ಬಂಗಾರದ ಒಡವೇನಾ ಡಿಸೈನ್ ಚೆನ್ನಾಗಿಲ್ಲಾಂತ ಬಿಟ್ಟು ಬೇರೆದನ್ನು ಕೊಂಡು ತರೋಕೆ. ಅವಳೇನು ಕೊರಳ ಚೈನಾ ತೆಳ್ಳಗಾತು ಅಂತ ಮುರಿಸಿ ದಪ್ಪನಾಗಿ ಮಾಡ್ಸಿ ಹಾಕ್ಕೋಳ್ಳೋಕೆ. ಒಂದು ಸಲ ಸೆಲೆಕ್ಟ್ ಮಾಡಿ ತಾಳಿ ಬಿಗಿದರೆ ಕಥೆ ಸುಖಾಂತ್ಯವೋ ದುಃಖಾಂತ್ಯವೋ ಲೈಫ್‌ಲಾಂಗ್ ಅಡ್ಜಸ್ಟ್ ಮಾಡ್ಕೊಂಡು ಹೋಗ್ತಿರೋದೆಯಾ. ಜಗಳಗಂಟಿನೋ, ಸೋಂಬೇರಿಯೋ, ಚೆಲ್ಲು ಸ್ವಭಾವದವಳೋ, ಮೊದ್ದು ಮಣಿಯೋ, ನಳಪಾಕ ಪ್ರವೀಣೆಯೋ, ನಾರುವಪಾಕ ಪರಿಣಿತಳೋ, ರಸಿಕಳೋ, ರೋಗಿಯೋ, ಅಳುಮುಂಜಿಯೋ, ಘಟವಾಣಿಯೋ, ಕೋಕಿಲವಾಣಿಯೋ, ಕರ್ಕಶಿಯೋ, ರಕ್ಕಸಿಯೋ, ಪಾಲಿಗೆ ಬಂದಿದ್ದು ಪಂಚಾಮೃತವಂತ ಸಾಯೋವರ್ಗೂ ಹೆಗಲಿಗೆ ಕಟ್ಕೊಂಡು ಏಗೋದು ತಾಳಿಕಟ್ಟಿದ ಪ್ರಾಣಿಯ ಕರ್ಮವೇ ಹೊರ್ತು ನೀತಿಪಾಠ ಹೇಳೋರ್ದಲ್ಲ, ಗೇಲಿಮಾಡೋ ಗೆಳೆಯರದ್ದಲ್ಲವೆಂಬುದು ರಮೇಶನ ಸಿದ್ಧಾಂತ.

'ನಾವು ಬಯಸಿದ್ದೆಲ್ಲವೂ ಒಂದು ಹುಡ್ಗಿನಲ್ಲೇ ಸಿಗೋಲ್ಲ ಕಣಲೆ. ಎಷ್ಟು ಹುಡ್ಗೀರ್ನ ನೋಡ್ತಿಯೋ' ಎಂದು ಗೆಳೆಯರು ರೇಗಿದ್ದೂ ಉಂಟು. 'ನೋಡಿದ್ದೆಲ್ಲಾ ಜರೀತಿದ್ರೆ ಲಾಸ್ಟಿಗೆ ಸಿಗೋದು ಗೂಬೇನೇ' ಎಂದು ತೀರ್ಪು ಕೊಟ್ಟವರೂ ಉಂಟು. 'ತಿಂಡಿ, ಕಾಫಿ ಸವಿದು ಹೆಣ್ಣು ಒಪ್ಪದೆ ಬರೋಕ್ಗೆ ಹೆಣ್ಣಿನ ನಿಟ್ಟುಸಿರು ತಟ್ಟದೆ ಬಿಟ್ಟಿತೇನಲೆ ಪಾಪಿ' ಎಂದು ಶಾಪ ಹಾಕಿದ ನೆಂಟರೂ ಉಂಟು. ಯಾರ ಶಾಪತಾಪಗಳಿಗೂ ರಮೇಶ ಸೊಪ್ಪು ಹಾಕಿದವನಲ್ಲವೇ ಅಲ್ಲ. ಮನೆಯವರು ಇವನನ್ನ ಮುಂದಿಟ್ಕೊಂಡು ಹೆಣ್ಣು ನೋಡಲು ಹೋಗದನ್ನೇ ರದ್ದುಪಡಿಸಿ ಗೆಳೆಯರಿಗೇ ಜವಾಬ್ದಾರಿ ಹೊರೆಸಿದ್ದರು. ಇವನ ಗೆಳೆಯರಿಗೆಲ್ಲಾ ಮದುವೆಯಾಗಿ ಕೂಸು ಕುನ್ನಿಗಳಾದ ಮೇಲೆ ಇವನ ಮದುವೆ ಬಗ್ಗೆ ಅವರಿಗೂ ತಾತ್ಸಾರ.

ಇಷ್ಟಾದರೂ ರಮೇಶ ಅವರಿಗೇನೂ ಪೂಸಿ ಹೊಡೆದವನಲ್ಲ. ಒಬ್ಬನೇ ವಧು ಪರೀಕ್ಷೆಗೆ ಹೊರಟ – ಅಶ್ವಮೇಧ ಕುದುರೆಯಂತೆ ಮನೆಯಿಂದ ಮನೆಗೆ ಅಲೆದ. ಕಡೆಗೂ ರಮೇಶನಂತಹ ಮೊಂಡು ಕುದುರೆಯನ್ನು ತನ್ನ ಮನೆಯಲ್ಲಿ ಕಟ್ಟಿ ಹಾಕಿ ಮದುವೆ ಎಂಬ ಸಮರಾಹ್ವಾನ ಕೊಟ್ಟಿದ್ದು ಮೀನಾಕ್ಷಿ.

ಮೀನಿನಂತೆ ಕಣ್ಣು ಉಳ್ಳವಳು ಯಾವಳೋ ಅವಳು ಮೀನಾಕ್ಷಿ. ಬಹುವ್ರೀಹಿ ಸಮಾಸ. ಸವರ್ಣದೀರ್ಘಸಂಧಿ ಅಂತ ಮಿಡ್ಲ್ ಸ್ಕೂಲಲ್ಲಿ ತಾನು ಕೇಳುತ್ತಿದ್ದ ಪಾಠ ನೆನಪಾಗಿ ಕಾಫಿ ಹಿಡಿದು ಬಂದ ಅವಳ ಕಣ್ಣುಗಳನ್ನೇ ವೀಕ್ಷಿಸಿದ. ದೇವರಾಣೆಗೂ ಅವಳ ಕಣ್ಣುಗಳು ಮೀನಿನಂತಿರಲಿಲ್ಲ. ಅವಳ ಜಲಮಿಶ್ರಿತ ಕಣ್ಣುಗಳು ಕಿಟಕಿಯಿಂದ ಹಾದುಬರುವ ಬೆಳಕಿನಲ್ಲಿ ಮಿಕ್ಸ್ ಆಗಿ ಫಳಫಳನೆ ಹೊಳೆವಾಗ ಜಲಜಾಕ್ಷಿ ಎಮಬ ನಾಮಧೇಯವೇ ಇವಳಿಗೆ ಲಾಯಕ್ಕು ಅಂದುಕೊಂಡ. ಹೇಗೂ ಮದುವೆಯಲ್ಲಿ ಹೆಸರು ಬದಲಾಯಿಸುವ ಸಂಪ್ರದಾಯ ಉಂಟಲ್ಲವೆಂದು ತನ್ನನ್ನು ತಾನೇ ಸಂತೈಸಿಕೊಂಡ. ಅವಳ ಮೇಲೆ ಮತ್ತೊಮ್ಮೆ ಚಿಕಿತ್ಸಕ ನೋಟ ಬೀರಿದ. ಬಣ್ಣವೂ ಬಿಳೀನೂ ಅಲ್ಲ ತಿಳೀನೂ ಅಲ್ಲ. ಶಂಕಿತನಾಗಿ ಪಾದಗಳನ್ನು ನೋಡಿದ್ದ. ಕರಗಿಲ್ಲವೆಂಬ ಖಾತರಿಯಾದ ಮೇಲೆಯೇ ಸಮ್ಮತಿಸಿದ್ದ ಭೂಪ.